# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ, ನ್ಯಾಯಾಲಯದಲ್ಲಿ

## ಸಿ.ಸಿ ನಂ: 81/2025

| ಪಿರ್ಯಾದುದಾರರು | ವಿರುದ್ಧ | ಆರೋಪಿ: |
|---|---|---|
| ಡಿ.ಓ ಹುಲುಗಪ್ಪ ಬಿನ್ ಓಂಕಾರಪ್ಪ,<br>ವಯಸ್ಸುಃ 61 ವರ್ಷ, ವೃತ್ತಿಃ ವ್ಯವಸಾಯ ,<br>ವಾಸಃ ದೊಡ್ಡಗಟ್ಟ ಗ್ರಾಮ,<br>ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ. | | ಶ್ರೀನಿವಾಸ ವೈ.ಎನ್. ಬಿನ್ ನರಶಿಂಹಲು,<br>ವಾಸಃ ದೊಡ್ಡಗಟ್ಟ ಗ್ರಾಮ, ಚನ್ನಗಿರಿ<br>ತಾಲ್ಲೂಕು, ಹಾಲಿ ವಾಸಃ ಮನೆ ನಂಬರು<br>1287/36, ಲಕ್ಷ್ಮೀ ನರಶಿಂಹಸ್ವಾಮಿ<br>ನಿಲಯ, ಶಿವಕುಮಾರ ಸ್ವಾಮಿ ಬಡಾವಣೆ,<br>2 ನೇ ಹಂತ, ದಾವಣಗೆರೆ. |

## ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ. 351 ರಡಿ ಆರೋಪಿ ಹೇಳಿಕೆ.

ಪ್ರಶ್ನೆ 1 : ಫ್ರಾ.ಸಾ:1 ಡಿ.ಓ ಹುಲುಗಪ್ಪ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ತನ್ನ ಕಡೆಯಿಂದ ದಿನಾಂಕ 18.02.2025 ರಂದು ರೂಃ 2,00,000/- ಹಣವನ್ನು ಕೈಗಡ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಹಣವನ್ನು ಮರು ಪಾವತಿ ಮಾಡಲು ಒಪ್ಪಿದ್ದರು." ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 2 : ಫ್ರಾ.ಸಾ:1 ರವರು ಮುಂದುವರಿದು, "ಸದರಿ ಸಾಲದ ಮರು ಪಾವತಿಗಾಗಿ ನೀವು ಸೌತ್ ಇಂಡಿಯನ್ ಬ್ಯಾಂಕ್, ದಾವಣಗೆರೆ ಶಾಖೆಯ ಪೋಸ್ಟ್ ಡೇಟೆಡ್ ಚೆಕ್ ಸಂಃ 24138 ನ್ನು ರೂಃ 2,00,000/- ಹಣಕ್ಕೆ ದಿನಾಂಕಃ 18.03.2025 ಎಂದು ಮುಂದಿನ ದಿನಾಂಕ ನಮೂದಿಸಿ ತನಗೆ ನೀಡಿದ್ದೀರಿ" ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 3 : ಫಾ.ಸಾ:1 ರವರು ಮುಂದುವರಿದು, ನೀವು ಕೊಟ್ಟ "ಸದರಿ ಚೆಕ್ಕನ್ನು ದಿಃ 21.03.2025 ರಂದು ತಾನು ತನ್ನ ಖಾತೆ ಇರುವ ಕರ್ನಾಟಕ ಗ್ರಾಮೀಣ ಬ್ಯಾಂಕ್, ಕಬ್ಬಳ ಶಾಖೆಯ ಮುಖಾಂತರ ನಗದೀಕರಣಕ್ಕಾಗಿ ಹಾಜರುಪಡಿಸಿದ್ದು, ಸದರಿ ಚೆಕ್ಕು ದಿಃ 21.03.2025 ರಂದು "ಖಾತೆಯು ಕ್ಲೋಸ್" ಎಂಬ ಹಿಂಬರದೊಂದಿಗೆ ಅಮಾನ್ಯಗೊಂಡಿರುತ್ತದೆ" ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 4 : ಫಾ.ಸಾ:1 ರವರು ಮುಂದುವರಿದು, ಮೇಲ್ಕಂಡ ವಿಚಾರವಾಗಿ ದಿನಾಂಕಃ 28.03.2025 ರಂದು ತಮ್ಮ ವಕೀಲರ ಮುಖಾಂತರ ಲೀಗಲ್ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ನಿಮಗೆ ಖುದ್ದು ಜಾರಿಯಾಗಿದ್ದರೂ ಸಹಾ ನೀವು ಸದರಿ ನೋಟಿಸ್‌ಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಮತ್ತು ಚೆಕ್ಕಿನ ಹಣವನ್ನು ಸಹ ಮರುಪಾವತಿಸಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 5 : ನಿಮ್ಮ ಪರವಾಗಿ ಸಾಕ್ಷಿಗಳು ಇವೆಯೆ? ಸಾಕ್ಷಿಗಳು ಇದ್ದರೆ ಹೆಸರು ಹಾಗೂ ವಿಳಾಸ ತಿಳಿಸಿ?

ಉತ್ತರ :

ಪ್ರಶ್ನೆ 6 : ನೀವು ಹೆಚ್ಚಿಗೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರ :

(ಆರೋಪಿತನ ಹೇಳಿಕೆಗಳನ್ನು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಕೇಳಿ ಅವರು ಕೊಟ್ಟ ಉತ್ತರಗಳನ್ನು ಅವರು ಕೊಟ್ಟಂತೆ ಬರೆದುಕೊಳ್ಳಲಾಗಿರುತ್ತದೆ ಅಂತಾ ಈ ಮೂಲಕ ದೃಡೀಕರಿಸುತ್ತೇನೆ.)

ಸ್ಥಳಃ ಚನ್ನಗಿರಿ
ದಿನಾಂಕಃ 10.02.2026.

ಸಹಿ/-
**ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಚನ್ನಗಿರಿ.**

**ಆರೋಪಿತನ ಸಹಿ:-**